# ಬೆಕ್ಕಿನ ಬಾಲ!

**ವರ್ಷದುದ್ದಕ್ಕೂ ಹೂವಿನ ಗೊಂಚಲುಗಳಿಂದ ಕಂಗೊಳಿಸುವ ಈ 'ರೆಡ್ ಹಾಟ್ ಕ್ಯಾಟ್ಸ್ ಟೇಲ್' ಮನೆಯ ಮುಂದಿನ ಹೂದೋಟಕ್ಕೆ ಮೆರುಗು ನೀಡುತ್ತದೆ.**

ಚಿತ್ರ ಬರಹ:
**ಪ್ರಕಾಶ ಎಸ್. ಮನ್ನಂಗಿ**

ಈ 'ಬೆಕ್ಕಿನ ಬಾಲ'ದ ತವರು ಓಸಿಯಾನಾ ಮತ್ತು ಹವಾಯಿ. ಅನಂತರ ಉತ್ತರ ಅಮೆರಿಕಾ ಮತ್ತು ಮೆಕ್ಸಿಕೋಗಳಲ್ಲಿ ಕಾಣಿಸಿಕೊಂಡಿತು. ಉಷ್ಣ ಪ್ರದೇಶಗಳಲ್ಲಿ ಕಾಣಿಸುತ್ತಿರುವ ಈ ಮನಮೋಹಕ ಸಸ್ಯ ಸುಮಾರು 6 ಅಡಿಗಳವರೆಗೆ ಹರಡಿಕೊಂಡು, 12 ಅಡಿಗಳವರೆಗೆ ಬೆಳೆಯುತ್ತದೆ.

ಸಸ್ಯಶಾಸ್ತ್ರದಲ್ಲಿ ಅಕೆಲಿಫಾ ಹಿಸ್ಪಿಡಾ ಎಂದು ಕರೆಯುವ ಯುಫೋರ್ಬಿಯೇಸಿ ಕುಟುಂಬದ ಅಲಂಕಾರಿಕ ಸಸ್ಯವಿದು. ಅಕೆಲಿಫಾ ಜಾತಿಯು ಯುಫೋರ್ಬಿಯೇಸಿ ಕುಟುಂಬದಲ್ಲೇ ನಾಲ್ಕನೆಯ ಅತ್ಯಂತ ದೊಡ್ಡ ಜಾತಿಯಾಗಿದೆ. ಆಂಗ್ಲ ಭಾಷೆಯಲ್ಲಿ 'ರೆಡ್ ಹಾಟ್ ಕ್ಯಾಟ್ಸ್ ಟೇಲ್' ಎಂದು ಕರೆಯುತ್ತಾರೆ. ಈ ಸಸ್ಯದ ಹೂಗೊಂಚಲುಗಳು ಬೆಕ್ಕಿನ ಬಾಲದಂತೆ ಇರುವುದರಿಂದ ಕನ್ನಡದಲ್ಲಿ 'ಬೆಕ್ಕಿನ ಬಾಲ' ಎಂಬ ಹೆಸರೇ ಒಪ್ಪುತ್ತದೆ. ಜೊತೆಗೆ ಚೆನಿಲ್ ಪ್ಲಾಂಟ್, ಫಿಲಿಪ್ಪೀನ್ ಮೆಡೂಸಾ ಎಂಬ ಹೆಸರುಗಳೂ ಇವೆ.

ಅಕೆಲಿಫಾದಲ್ಲಿ ಸುಮಾರು 200 ಪ್ರಭೇದಗಳಿವೆ. ಇವುಗಳಲ್ಲಿ ಅಕೆಲಿಫಾ ಹಿಸ್ಪಿಡಾ ಮಾತ್ರ ಅಚ್ಚ ಕೆಂಪು ಬಣ್ಣದ ಹೂಗೊಂಚಲುಗಳಿಂದ ಕಂಗೊಳಿಸುತ್ತದೆ.

ವರ್ಷದುದ್ದಕ್ಕೂ ಹೂಗೊಂಚಲುಗಳಿಂದ ಕಂಗೊಳಿಸುವುದರಿಂದ ಈ ಸಸ್ಯ ಉದ್ಯಾನವನ, ಹೂದೋಟ, ಮನೆಯ ಮುಂದಿನ ವನಗಳಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ. ಉದ್ಯಾನವನ, ಮನೆಯ ಮುಂದಿನ ಪ್ರವೇಶ ದ್ವಾರದ ಎರಡೂ ಬದಿಗಳಲ್ಲಿ ಬೆಕ್ಕಿನ ಬಾಲ ಬೆಳೆಸಿದರೆ ಅತಿಥಿಗಳು ಮದುಗೊಳ್ಳುವುದು ಖಚಿತ. ಜತೆಗೆ ನಿಮ್ಮ ಮನೆಯನ್ನು ಪ್ರವೇಶಿಸುವಾಗ ನಿಮಗೂ ಖುಷಿಯಾಗುತ್ತದೆ. ಸೂರ್ಯರಶ್ಮಿ ಹೇರಳವಾಗಿ ದೊರಕುವ, ಸುತ್ತಲೂ ನೀರಿನಿಂದ ಆವೃತವಾದ ಸ್ಥಳದಲ್ಲಿ ಈ ಹೂವಿನ ಗಿಡ ಸೊಗಸಾಗಿ ಬೆಳೆಯುತ್ತದೆ.

ಕಾಂಡದ ತುಂಡುಗಳಿಂದ ಇದನ್ನು ಸುಲಭವಾಗಿ ಬೆಳೆಸಬಹುದು. ಬೀಜಗಳಿಂದಲೂ ಬಿತ್ತಿ ಬೆಳೆಸಲು ಸಾಧ್ಯ. ಬೇಸಿಗೆಯಲ್ಲಿ ಕತ್ತರಿಸಿದರೆ ಮಳೆಗಾಲಕ್ಕೆ ಸೊಗಸಾಗಿ ಚಿಗುರಿ ಉದ್ಯಾನವನಕ್ಕೆ ಮೆರುಗು ನೀಡುತ್ತದೆ. ತಾಪ ಮತ್ತು ತಂಪು ಹವೆಯನ್ನು ಬಯಸುವ ಈ ಗಿಡವನ್ನು ವರ್ಷಕ್ಕೊಮ್ಮೆ ನಿಮಗೆ ಸೂಕ್ತವೆನಿಸಿದಂತೆ ಕತ್ತರಿಸಬಹುದು.

ಇಂಡೋನೇಷ್ಯಾದಲ್ಲಿ ಇದನ್ನು ಈಗಲೂ ಔಷಧಿಯಂತೆ ಬಳಸುತ್ತಾರೆ. ಹೊಟ್ಟೆನೋವಿನ ಹಾಗೂ ಸಣ್ಣಕರುಳಿನ ಹುಳುಗಳನ್ನು ಕೊಲ್ಲಲು, ಹುಣ್ಣುಗಳ ಮೇಲೆ ಪಟ್ಟಿಯನ್ನು ಹಾಕಲು ಬಳಸುತ್ತಾರೆ. ಇದರ ಎಲೆಗಳನ್ನು ನೀರಿನಲ್ಲಿ ಕುದಿಸಿ ಆಹಾರದಂತೆ ಉಪಯೋಗಿಸುವುದೂ ಇದೆ.

